ಅಸಲು ದಾವೆ ಸಂಖ್ಯೆ- 184/2015
ಪಿಡಬ್ಲ್ಯೂ- 01
ದಿನಾಂಕಃ 30.11.2022
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ ಬಿ ಟಿ ವಕೀಲರಿಂದ

ಬಸನಗೌಡ ಪಾಟೀಲ ಸರ್ವೆಯರ್ ಅಂತಾ ಸವಣೂರಿನಲ್ಲಿ ಕೆಲಸ ಮಾಡುತ್ತಿದ್ದರು. ದಾವಾ ಆಸ್ತಿಯ ನಂ.248 ಇರುತ್ತದೆ. ಯಾವ ಸರ್ವೆ ನಂಬರಿನಲ್ಲಿ ಸದರಿ ದಾವಾ ಆಸ್ತಿಯನ್ನು ನನಗೆ ಸರಕಾರ ಮಂಜೂರು ಮಾಡಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. 1994 ರಲ್ಲಿ ನನಗೆ ಮಂಜೂರಾಗಿರುತ್ತದೆ. ನಾವು ಮೂಲತಃ ಅಮರಗೋಳ ಗ್ರಾಮ ತಾಲೂಕು ಹುಬ್ಬಳ್ಳಿಯವರು. ಸದರಿ ಅಮರಗೋಳ ನನ್ನ ಗಂಡನ ಊರು ಅನ್ನುವುದು ಸರಿ. ಅಲ್ಲಿ ನಮ್ಮ ಗಂಡನಿಗೆ ಮನೆ ಇರುತ್ತದೆ. ಮನೆ ಕಟ್ಟಿಕೊಳ್ಳುವ ಸಲುವಾಗಿ ದಾವಾ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ. ಮಂಜೂರು ಮಾಡಿದಾಗಿನಿಂದ ಇಲ್ಲಿಯವರೆಗೆ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಟಿ ಎಸ್ ಪ್ರಕರಣಗಳು ನಡೆಯುತ್ತಿರುತ್ತವೆ ಎನ್ನುವುದು ಸರಿ. ದಾವಾ ಆಸ್ತಿ ಕಂದಾಯ ಇಲಾಖೆಗೆ ಸಂಬಂಧಪಟ್ಟ ಆಸ್ತಿ ಎನ್ನುವುದು ಸರಿ. ದಾವಾ ಆಸ್ತಿಯನ್ನು ಅಳತೆ ಮಾಡಲು ಬಂದಾಗ ನಾನು ಸ್ಥಳದಲ್ಲಿ ಇದ್ದೆ. ಸರ್ವೆ ನಂ.563 ಈ ಜಮೀನು ಕುರಿತು ವಿವಾದ ಇರುತ್ತದೆ ಎನ್ನುವುದು ಸರಿ. ಸರ್ವೆಯರ್ ಅಳತೆ ಮಾಡಲು ಬಂದಾಗ ಸರ್ವೆ ನಂ.541, 542, 543 ಅಂತಾ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆಯರ್ ರಿಪೋರ್ಟ ತೋರಿಸಿದರೆ ನನಗೆ ಏನು ಸಲ್ಲಿಸಿರುತ್ತಾರೆ ಅಂತಾ ನನಗೆ ಗೊತ್ತಾಗುತ್ತದೆ ಎಂದರೆ ನಂಬರು ಮಾತ್ರ ಹೇಳುತ್ತೇನೆ

ಸಾಕ್ಷಿಗೆ ಸರ್ವೆಯರ್ ವರದಿ ತೋರಿಸಿ ಅದರಲ್ಲಿ ಸರ್ವೆ ನಂ.563 ಗುರುತಿಸಲು ಕೇಳಿದಾಗ ಅದರಲ್ಲಿ 563 ಬರೆದಿರುವುದಿಲ್ಲ ಅಂತಾ ನುಡಿಯುತ್ತಾರೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅದು ಸರ್ವೆ ನಂ.540 ರಿಂದ 544 ಗಳಿಗೆ ಮಾತ್ರ ಸಂಬಂಧಪಟ್ಟಿರುತ್ತವೆ ಎಂದರೆ ಸರಿಯಲ್ಲ, ನಮ್ಮ ಹತ್ತಿರ ಸರ್ವೆ ನಂ.563 ಅಂತಾ ತೋರಿಸಿರುವ ದಾಖಲೆಗಳು ಇರುತ್ತವೆ. ದಾವಾ ಆಸ್ತಿಯ ಚಕಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ದೇವಸ್ಥಾನ ಇರುತ್ತದೆ, ಪಶ್ಚಿಮಕ್ಕೆ ಲೋಹಾರ ಇವರ ಆಸ್ತಿ, ಉತ್ತರಕ್ಕೆ ಪಾಳಾ ಬದಾಮಿ ರಸ್ತೆ, ದಕ್ಷಿಣಕ್ಕೆ ಸರಕಾರಿ ಕಂದಕಗಳು ಇರುತ್ತವೆ. ತಹಶೀಲ್ದಾರವರು ಈಗ ನಾನು ಹೇಳಿದ ಚಕಬಂದಿ ಹಾಕಿ ಮಂಜೂರು ಮಾಡಿರುತ್ತಾರೆ ಅಂತಾ ತೋರಿಸಲು ದಾಖಲೆಗಳು

ಇರುತ್ತವೆ. ಸುಳ್ಳು ಚಕಬಂದಿ ತೋರಿಸಿ ಆಸ್ತಿ ಹೊಡೆದುಕೊಳ್ಳಬೇಕು ಅಂತಾ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಆಸ್ತಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ಕೆಎಟಿ ಯಲ್ಲಿ ಆದೇಶವಾಗಿರುತ್ತದೆ. ಕೆಎಟಿಯಲ್ಲಿ ಉಪ ವಿಭಾಗಾಧಿಕಾರಿಗಳ ಆದೇಶವನ್ನು ರದ್ದುಪಡಿಸಿ ಪುನರ್ ಪರೀಶಿಲಿಸಲು ಆದೇಶ ಮಾಡಿರುತ್ತಾರೆ. ದಾವಾ ಆಸ್ತಿ ಕುರಿತು ಹಲವಾರು ಪ್ರಕರಣಗಳನ್ನು ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ, ಸಾಕ್ಷಿ ಸ್ವತಃ ತಕರಾರು ಮಾಡಿದ್ದಕ್ಕಾಗಿ ಪ್ರಕರಣ ಮಾಡಿರುತ್ತೇವೆ. ಪ್ರತಿವಾದಿಯರು ಟಿ ಎಂ ಸಿ ನಂ.546/2 ನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 546/2 ರ ಪೂರ್ವಕ್ಕೆ ಪ್ರತಿವಾದಿಯರ ಇನ್ನೊಂದು ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಪಶ್ಚಿಮಕ್ಕೆ ಸರಕಾರಿ ಪಡಾ ಜಾಗೆ ಇರುತ್ತದೆ ಎಂದರೆ ಸರಿಯಲ್ಲ, ಅವರು ನಮ್ಮ ಆಸ್ತಿಯಲ್ಲಿ ಅತೀಕ್ರಮಣ ಮಾಡಿರುತ್ತಾರೆ 2015 ರಲ್ಲಿ ಒತ್ತುವರಿ ಮಾಡಿರುತ್ತಾರೆ. ಒತ್ತುವರಿ ಮಾಡಿ ಗೋಡೆ ಕಟ್ಟಿಕೊಂಡಿರುತ್ತಾರೆ. ಎಷ್ಟು ಒತ್ತುವರಿ ಮಾಡಿರುತ್ತಾರೆ ಅಂತಾ ನನಗೆ ಹೇಳಲು ಬರುವುದಿಲ್ಲ. ಒತ್ತುವರಿ ಮಾಡಿದ ಜಾಗೆಯಲ್ಲಿ ಅಂಗಡಿ ಹಾಕಿಕೊಂಡಿರುತ್ತಾರೆ. ಒತ್ತುವರಿ ಮಾಡಿದ ಆಸ್ತಿ 3-4 ಸಾವಿರ ಚದರ ಅಡಿ ಆಗಬಹುದಾ ಎಂದರೆ ನನಗೆ ಗೊತ್ತಾಗುವುದಿಲ್ಲ. ಒತ್ತುವರಿ ಮಾಡಿದ ಜಾಗೆಯನ್ನು ನಮಗೆ ಕೊಡಬೇಕು ಅಂತಾ ಕೇಳಿಕೊಂಡಿಲ್ಲ ಎಂದರೆ ಸರಿಯಲ್ಲ, ಕೇಳಿಕೊಂಡಿರುತ್ತೇವೆ, ಆದರೆ ಅವರು ಕೊಟ್ಟಿರುವುದಿಲ್ಲ. ಪ್ರತಿವಾದಿ ಖರೀದಿಸಿದ ಜಾಗೆಯ ಉತ್ತರಕ್ಕೆ ಸರಕಾರಿ ರಸ್ತೆ, ದಕ್ಷಿಣಕ್ಕೆ ಕಂದಕ, ಪೂರ್ವಕ್ಕೆ ಪ್ರತಿವಾದಿಯರ ಇನ್ನೊಂದು ಆಸ್ತಿ, ಪಶ್ಚಿಮಕ್ಕೆ ಸರಕಾರಿ ಪಡಾ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಿನಾಂಕಃ 04.06.2015 ರಂದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ, ನಮ್ಮ ಜಾಗೆ ಅತೀಕ್ರಮಣ ಮಾಡಿರುತ್ತಾರೆ ನನ್ನ ಪ್ರಕಾರ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿ. ನಾವು ದಾವಾ ಅಸ್ತಿಯ ಕಬ್ಜೆಯಲ್ಲಿಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ 248/ಟಿಎಂಸಿ ನಂ.563 ಅಂತಾ ಪೂರ್ವ ಪಶ್ಚಿಮ 115 ಪೂಟು ಉತ್ತರ ದಕ್ಷಿಣ 110 ಪೂಟು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯ ಮಾಲೀಕರಲ್ಲ ಮತ್ತು ಇವತ್ತಿನವರೆಗೆ ಕಬ್ಜೆಯಲ್ಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಹಕ್ಕು ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.

Case called out, Plaintiff No.1 and counsel present. MSM files memo with 1 document. Plaintiff No.1 filed affidavit on oath she is examined as PW-1 exp-1 to 4 marked. Fully cross examined. MSM submits no further evidence. Hence side of plaintiff is closed. CSM submits no oral evidence of defendants. Hence side of defendants is closed. For plaintiff arguments on merits . Call on 16-10-2020

CJ and JMFC. Savanur

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

ಪ್ರತಿವಾದಿಯರು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪ್ರತಿವಾದಿಯರು ಗೈರು ಹಾಜರಿದ್ದು, ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಕಾರಣವಿಲ್ಲದೇ ಸಮಯಾವಕಾಶ ಕೋರಿರುತ್ತಾರೆ. ಮನವಿಯನ್ನು ತಿರಸ್ಕರಿಸಲಾಯಿತು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ವಾದಿ ಮತ್ತು ವಾದಿ ಪರ ವಕೀಲರು ಗೈರು ಹಾಜರು ಇದ್ದುದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.